ಅವನನ್ನು ಮಾತನಾಡಿಸಿ, ಕರೆದು, ಕೆಲವರು ಕಾಫೀ ಕೊಟ್ಟು ನಿಲ್ಲಿಸಿ ಮಾತಿಗೆಳೆಯುತ್ತಿದ್ದರು. ಇವತ್ತು ಯಾವ ನೀರು ಬಿಟ್ಟಿರುವುದು, ಸಿಹಿ ನೀರಾ, ಉಪ್ಪು ನೀರಾ, ಮಿಕ್ಸ್ ನೀರಾ ಎಂದು ಕೇಳಿ ಖಚಿತಪಡಿಸಿಕೊಳ್ಳುತ್ತಿದ್ದರು. ನೀರು ಬಿಟ್ಟು ಎಷ್ಟೊತ್ತಾಯಿತು, ಎಷ್ಟು ಗಂಟೆಗೆ ಬಂದ್ ಮಾಡ್ತೀಯಾ ಎಂದೆಲ್ಲಾ ಕಕ್ಕುಲಾತಿಯಿಂದ ವಿಚಾರಿಸಿ, 'ಇವತ್ತು ಒಂದರ್ಧ ಗಂಟೆ ಹೆಚ್ಚಿಗೆ ಬಿಡಣ್ಣಾ, ಮನೆಯಲ್ಲಿ ನೆಂಟರಿದ್ದಾರೆ' ಎಂದು ಪುಸಲಾಯಿಸಿ ಅವನ ಕೈಯಲ್ಲಿ ಐದೋ, ಹತ್ತೋ ರೂಪಾಯಿ ಕೊಟ್ಟು ಪಾವನರಾಗುತ್ತಿದ್ದರು. ಅದು ಅವನಿಗೆ ತಿಂಗಳಿಗೊಮ್ಮೆ ಕೊಡುವ ಲಂಚದ ಹಾಗೆ. ಕೊಡದವರ ಲೈನಿಗೆ ನೀರು ಬಿಡದೇ ಸತಾಯಿಸಿಬಿಡುತ್ತಿದ್ದ. ಅವನನ್ನು ತಡೆದು ನಿಲ್ಲಿಸಿದಷ್ಟು ಹೊತ್ತೂ ನೀರು ಬಂದ್ ಆಗುವುದಿಲ್ಲವೆಂಬುದು ಖಾತ್ರಿ ಇದ್ದುದರಿಂದ, ಅವನನ್ನು ತಡೆಯುವ ಸರ್ಕಸ್ ಎಲ್ಲರೂ ಮಾಡುತ್ತಿದ್ದರು. ಮೇನ್ ರೋಡಿನ ಬದಿಯಲ್ಲಿ, ಒಂದು ಪುಟ್ಟ ಗುಂಡಿಯಲ್ಲಿ, ಅವನು ತನ್ನ ದೊಡ್ಡ ಸ್ಪ್ಯಾನರ್‌ನಿಂದ ವಾಲ್ವ್ ತಿರುವುದನ್ನು ಎಷ್ಟೋ ಸಲ ನೋಡಿದ್ದರಿಂದ, ಇಂತಹದ್ದೊಂದು ಸ್ಪ್ಯಾನರ್ ನಾವೂ ಮನೆಗೆ ತಂದಿಟ್ಟುಕೊಂಡು ತಿರುವಬಹುದಲ್ಲಾ ಎಂದು ಅಪ್ಪನಿಗೆ ಕೇಳಿದ್ದೆ. 'ಮೊದಲು ಇದಕ್ಕಿಂತ ದೊಡ್ಡ ವಾಲ್ವ್ ಒಂದನ್ನು ತಿರುವಿ ಬಂದಿರುತ್ತಾರೆ, ಆಗ ಮಾತ್ರ ನೀರು ಬರಲು ಸಾಧ್ಯ' ಎಂದು ಅಪ್ಪ ಉತ್ತರಿಸಿದಾಗ ನಿರಾಸೆಯಾಗಿತ್ತು.

ಮನೆಯಲ್ಲಿನ ಪ್ಲಾಸ್ಟಿಕ್, ತಾಮ್ರ, ಹಿತ್ತಾಳೆಯ ಕೊಡದ ಜೊತೆಗೆ ಒಂದು ಸ್ಟೀಲಿನ ಚೊಂಬು ಹೊರಗೆ ತಂದಿಡುವ ಕೆಲಸ ನನ್ನದಾಗಿದ್ದರೆ, ತಂಗಿ ಎರಡು ಅಡಿ ಉದ್ದದ ಪೈಪನ್ನು ತಂದು ಪಾತಾಳದಂತಿದ್ದ ತೊಟ್ಟಿಯಲ್ಲಿ ಮೆಟ್ಟಿಲಿನ ಸಹಾಯದಿಂದ ಇಳಿದು, ಅದನ್ನು ನೀರಿನ ಪೈಪಿನ ಮೂತಿಗೆ ತೂರಿಸಿ, ಕುಕ್ಕರುಗಾಲಿನಲ್ಲಿ ಕುಳಿತು, ಬಾಯಿಂದ ಎಳೆಯುವ ಸಾಹಸ ಶುರು ಹಚ್ಚಿಕೊಳ್ಳುತ್ತಿದ್ದಳು. ಅದರಲ್ಲಿ ಯಶಸ್ವಿಯಾಗದಿದ್ದರೆ ಸೀದಾ ಬಗ್ಗಿ ನೀರಿನ ಪೈಪಿಗೇ ಬಾಯಿ ಹಾಕಿ ಎಳೆಯುತ್ತಿದ್ದಳು. ನಳಗಳು ಇರುತ್ತಿದ್ದುದೇ ಭೂಮಿಯಿಂದ ಐದಾರು ಅಡಿ ಕೆಳಗಡೆಯಲ್ಲಿ, ಅದರಲ್ಲೂ ಚಾಲೂ ಬಂದ್ ಮಾಡುವ ನಳಗಳು ಆಗ ಕಡಿಮೆ. ಕೇವಲ ಕಬ್ಬಿಣದ ಪೈಪು, ಅದರ ಮೂತಿಗೆ ತಿರುವಲು ನಟ್ಟು ಅಷ್ಟೇ, ಬಹುತೇಕ ಮನೆಗಳಲ್ಲಿ. ನಟ್ಟೂ ಸಹ ತುಂಬಾ ಸಲ ಉಪಯೋಗವಾಗುತ್ತಿರಲಿಲ್ಲ, ಸಾಕಾಗುವಷ್ಟು ನೀರು ಬಿಟ್ಟರೆ ತಾನೇ? ಒಮ್ಮೊಮ್ಮೆ ಬಗ್ಗಿದಾಗ ಮುಗ್ಗರಿಸಿ ಕೆಳಕ್ಕೆ ಬಿದ್ದಿದ್ದೂ ಇದೆ. ನೀರು ಬರುವ ಹಬ್ಬದ ಮುಂದೆ ಅದೆಲ್ಲ ಲೆಕ್ಕಕ್ಕೇ ಇರುತ್ತಿರಲಿಲ್ಲ ಬಿಡಿ. ಪ್ರತೀ ಸಲ ಉಸಿರು ಹಾಕಿ ಎಳೆದಾಗಲೂ ವೇಗದಿಂದ ಬರುತ್ತಿದ್ದ ನೀರು ಗಂಟಲಿಗೆ ಸೇರಿ, ನೆತ್ತಿಗೇರಿ, ಅದನ್ನು ಎದ್ದು ಹೊರಗೆ ಉಗುಳಿ ಕೆಮ್ಮುತ್ತಾ ಮತ್ತೆ ತನ್ನ ದಂಡಯಾತ್ರೆ ಮುಂದುವರೆಸುತ್ತಿದ್ದಳು. ಎಳೆದಾಗ ಗುಬುಕ್ ಗುಬುಕ್ ಅಂತಾ ಸ್ವಲ್ಪ ಬರುವುದು ಮತ್ತೆ ನಿಲ್ಲುವುದು ನಡೆದೇ ಇರುತ್ತಿತ್ತು. ಅಂತೂ ಒಂದರ್ಧ ಗಂಟೆಯ ಸತತ ಪ್ರಯತ್ನದಿಂದ ಸರಾಗವಾಗಿ ನಲ್ಲಿಯಲ್ಲಿ ನೀರು ಬರತೊಡಗಿದಾಗ ಅಬ್ಬಾ! ಎಂದು ಎಲ್ಲರೂ ನಿಟ್ಟುಸಿರುಬಿಡುತ್ತಿದ್ದೆವು.

ನಗರಸಭೆಯವರು ನಳಗಳಿಗೆ ಬೋರ್‌ವೆಲ್ ಕನೆಕ್ಷನ್ ಕೊಡುವುದಕ್ಕೆ ಮುಂಚೆ ಬರೀ ವಾಣಿವಿಲಾಸ ಸಾಗರದ ಸಿಹಿನೀರು ಮಾತ್ರ ಬರುತ್ತಿತ್ತು. ನಂತರ ಆ ಕುಡಿಯುವ ನೀರನ್ನು ವಾರಕ್ಕೊಮ್ಮೆಯೋ, ಹದಿನೈದು ದಿನಕ್ಕೊಮ್ಮೆಯೋ ಮಾತ್ರ ಬಿಡುತ್ತಿದ್ದುದು. ಉಳಿದ ಸಮಯದಲ್ಲಿ ಮೂರ್‍ನಾಲ್ಕು ದಿನಕ್ಕೊಮ್ಮೆ ಬೋರ್ವೆಲ್ ನೀರು ಮಾತ್ರ. ಅದೂ ಸಣ್ಣಗೆ ಬರಲೋ ಬೇಡವೋ ಅಂತಾ ಕಿರುಬೆರಳಿನ ಗಾತ್ರದಲ್ಲಿ ಇಳಿಯುತ್ತಿತ್ತು. ಒಂದು ತಾಸು ಬಿಟ್ಟರೆ ಹೆಚ್ಚು. ಎಂದೂ ನಮ್ಮ ಮನೆಯಲ್ಲಿನ ತೊಟ್ಟಿಗಳು ಪೂರ್ತಿಯಾಗಿ ತುಂಬಿದ್ದು ನಾವು ನೋಡಿಯೇ ಇಲ್ಲ ಬಿಡಿ.

ನೀರು ಬಿಡುವವನು ಕುಡಿಯುವ ನೀರು ಬಿಟ್ಟಿದ್ದೇನೆ ಎಂದು ಹೇಳಿದರೂ ಸಹ ಅಮ್ಮನಿಗೆ ಸಮಾಧಾನ ಆಗುತ್ತಿರಲಿಲ್ಲ. ಸ್ವತಃ ತಾನೇ ಪರೀಕ್ಷೆ ಮಾಡಿದರೇನೇ ಆಕೆಗೆ ಸಮಾಧಾನ. ಆಕೆಯ ಟೆಸ್ಟಿನಲ್ಲಿ ಪಾಸಾದರೆ ಮಾತ್ರ ಅದಕ್ಕೆ ಅಡುಗೆ ಮನೆಗೆ ಪ್ರವೇಶ. ಇಲ್ಲದಿದ್ದರೆ ಸೀದಾ ಬಳಸಲು ಮನೆಯ ಮೇಲಿನ ಟ್ಯಾಂಕಿಗೆ ಲಿಫ್ಟ್ ಆಗುತ್ತಿತ್ತು.

ಸ್ಟೀಲ್ ಚೊಂಬಿನಲ್ಲಿ ಮೊದಲು ನೀರನ್ನು ಹಿಡಿದು ದೇವರಿಗೆ ನೈವೇದ್ಯದಂತೆ ಅಮ್ಮನಿಗೆ ಕೊಟ್ಟಾಗ, ಮೊದಲು ಅದರ ಬಣ್ಣದ ಪರೀಕ್ಷೆ ನಡೆಯುತ್ತಿತ್ತು. ಸ್ವಲ್ಪ ಹಸಿರು ಬಣ್ಣದಿಂದ ಕೂಡಿದ್ದರೆ ಅದು ವಾಣಿ ವಿಲಾಸ ಸಾಗರದ ಸಿಹಿ ನೀರು, ಅದರಲ್ಲೂ ಸಣ್ಣದಾಗಿ ಒಂದೆರಡು ಹುಳುಗಳು, ಬುಳುಬುಳು ಅಂತಾ ನೀರಿನ ಜೊತೆಗೆ ಕಂಡರೆ, ಇನ್ನೂರು ಪ್ರತಿಶತ ಸಿಹಿನೀರು ಅಂತಾ ಸರ್ಟಿಫೈ ಮಾಡಿಬಿಡುತ್ತಿದ್ದಳು. ತಿಳಿ ಹಸಿರಿದ್ದರೆ ಬೋರ್ ನೀರನ್ನು ಮಿಕ್ಸ್ ಮಾಡಿದ್ದಾನೆ ಎಂದು ಕಂಡು ಹಿಡಿಯುವ ಚಾಣಾಕ್ಷತನ, ಪೂರ್ತಿ ಪಾರದರ್ಶಕತೆಯಿಂದ ಕೂಡಿದ ನೀರಾಗಿದ್ದರೆ, ಪಕ್ಕಾ ಸವಳು ನೀರು ಅಂತಾ ಹೇಳಿಬಿಡುತ್ತಿದ್ದಳು. ಅಷ್ಟಕ್ಕೂ ಸಮಾಧಾನವಾಗದೆ ಎರಡನೆಯ ಹಂತದ ಪರೀಕ್ಷೆಗೆ ತಯಾರಾಗುತ್ತಿದ್ದಳು. ಚೊಂಬಿನಲ್ಲಿರುವ ನೀರನ್ನು ಗಟಗಟ ಅಂತಾ ಕುಡಿಯುವಾಗ, ಗಂಟಲಿನಲ್ಲಿ ಸರಾಗವಾಗಿ ನುಂಗಿದರೆ ಸಿಹಿನೀರು, ನುಂಗುವಾಗ ಸ್ವಲ್ಪ ಗಂಟಲಿಗೆ ಕಿರಿಕಿರಿ ಎನಿಸಿದರೆ ಮಿಕ್ಸ್ ನೀರು ಅಂತಾ ಗೊತ್ತಾಗಿಬಿಡುತ್ತಿತ್ತು. ನಮ್ಮ ಗಂಟಲಿಗೂ ಸ್ವಲ್ಪ ಸುರುವಿ ಸಲಹೆ ಕೇಳುತ್ತಿದ್ದಳು. ಅಂತೂ ನೀರು ಎಲ್ಲಾ ಹಂತಗಳನ್ನು ಲ್ಯಾಬೋರೇಟರಿಯಲ್ಲಿ ಮಾಡುವ ಪರೀಕ್ಷೆಗಳನ್ನು ದಾಟಿದ ಹಾಗೆ ದಾಟಿ ನೂರು ಪ್ರತಿಶತ ಗ್ಯಾರಂಟೀ ಸಿಹಿನೀರು ಎನ್ನುವ ಪ್ರಮಾಣಪತ್ರ ಅಮ್ಮನಿಂದ ಸಿಕ್ಕಾಗ, ಕುಡಿಯುವ ನೀರು ತುಂಬುವ ಯೋಜನೆಗೆ ಚಾಲನೆ ದೊರಕುತ್ತಿತ್ತು.

ಅಡುಗೆ ಮನೆಯಲ್ಲಿದ್ದ ಹಂಡೆಗಳು, ಸ್ಟೀಲ್ ಟ್ಯಾಂಕಿಗಳು, ದೊಡ್ಡ ದೊಡ್ಡ ಅಲ್ಯೂಮಿನಿಯಮ್ ಹಾಗೂ ಸ್ಟೀಲ್ ಡಬರಿಗಳು, ಜಗ್ಗು, ಚೊಂಬು ಎಲ್ಲವನ್ನೂ ಸರತಿಯಲ್ಲಿ ಜೋಡಿಸಿಡುತ್ತಿದ್ದಳು. ಹುಳುಗಳನ್ನು ಹೊರಹಾಕಲು ಅವುಗಳ ಮೂತಿಗೆ ದೊಡ್ಡದೊಂದು ಪ್ಲಾಸ್ಟಿಕ ಜಾಳಿಗೆಯನ್ನು (ಕಾಫೀ ಸೋಸುವ ಜಾಳಿಗೆ ಹಾಗೆ) ಇಟ್ಟು ನೀರು ಹಾಕಬೇಕಿತ್ತು. ತೊಟ್ಟಿಯೊಳಗೆ ಕುಕ್ಕರುಗಾಲಿನಲ್ಲಿ ಕುಳಿತ ತಂಗಿ ಒಂದೊಂದೇ ಕೊಡ ತುಂಬಿಸಿ ಕೊಡುತ್ತಿದ್ದಂತೆ ನಾನು ಅದನ್ನು ಸೊಂಟದ ಮೇಲೆ ಎತ್ತಿಕೊಂಡು ಒಳಗೆ ಒಯ್ಯುತ್ತಿದ್ದೆ. ನಡುಮನೆಯಿಂದ ಅದನ್ನು ತಮ್ಮ ಹೆಗಲಿಗೆ ಹಸ್ತಾಂತರಿಸಿಕೊಂಡು ಅಡುಗೆಮನೆಗೆ ಒಯ್ಯುತ್ತಿದ್ದ. ಅಮ್ಮನ ಪಾತ್ರೆ ಪಗಡ ಎಲ್ಲ ತುಂಬುವ ಹೊತ್ತಿಗೆ ಕನಿಷ್ಠ ಒಂದು ತಾಸು ನೀರು ಹೊರುತ್ತಿದ್ದೆವು. ಕೊನೆಗೆ ಉಳಿದ ಪ್ಲಾಸ್ಟಿಕ್ ಕೊಡಗಳನ್ನೆಲ್ಲಾ ತುಂಬಿಸಿ, ಪೂಜೆಗೆಂದು ತಾಮ್ರದ ಕೊಡದಲ್ಲಿ ಮಡಿ ನೀರು ಹಿಡಿಯುವುದರೊಂದಿಗೆ ಕುಡಿಯುವ ನೀರು ಹಿಡಿಯುವ ಕಾರ್ಯಕ್ರಮ ಯಶಸ್ವಿಯಾಗಿ ಮುಕ್ತಾಯವಾಗುತ್ತಿತ್ತು. ಇನ್ನು ತೊಟ್ಟಿಗೆ ಬಿದ್ದ ನೀರನ್ನು ತಲೆಸ್ನಾನ ಮಾಡುವುದಕ್ಕಾಗಿ ಒಂದು ಡ್ರಮ್ ತುಂಬಿಡುತ್ತಿದ್ದೆವು (ಲಿಫ್ಟ್

